ಈ ದಿನ ದಿನಾಂಕಃ 14.02.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>**

ನನ್ನ ದಾವೆಗೆ ಪೂರಕವಾಗಿ ಈ ಕೆಳಗಿನ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗೆ ಒಳಪಡಿಸಲು ವಿನಂತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೆ ಒಳಪಡಿಸಲಾಯಿತು.

| ಕ್ರ.ಸಂ | ದಾಖಲಾತಿಯ ವಿವರ | ನಿಶಾನೆ ಸಂಖ್ಯೆ |
|---|---|---|
| 1 | ದಿಃ 25.11.1996ರ ಮೂಲ ಕ್ರಯಪತ್ರ | ನಿಡಿ 1 |
| 2 | ಗಂಗಾಧರಪ್ಪ ಸಿ ರವರ ಮರಣ ಪ್ರಮಾಣಪತ್ರ | ನಿಡಿ 2 |
| 3 | ಸರ್ವೆ ನಂ. 77/3ರ 2022-23 ನೇ ಸಾಲಿನ ಪಹಣಿ | ನಿಡಿ 3 |

(ಈ ಹಂತದಲ್ಲಿ ದಿಃ 11.08.2012 ರ ಅಡಿಕೆ ಫಸಲು (ಅಸಿ ಅಡಿಕೆ ಕಾಯಿ) ಸಾಲದ ಆದಾರ ಪತ್ರವನ್ನು ನಿಶಾನೆಗೊಳಪಡಿಸುವಂತೆ ಕೋರಿರುತ್ತಾರೆ. ಸದರಿ ದಾಖಲೆ ಕರಾರು ಪತ್ರವಾಗಿದ್ದು ಮತ್ತು ಅದರಲ್ಲಿ 1,75,000/- ರೂಗಳ ಭದ್ರತೆಯ ಮತ್ತು ತಿರುವಳಿಯ ಕರಾರು ಉಲ್ಲೇಖಿಸಲಾಗಿರುತ್ತದೆ. ಸದರಿ ದಾಖಲೆ 200/- ರೂ ಛಾಪಾಕಾಗರದ ಮೇಲಿದ್ದು ಸೂಕ್ತವಾದ ಮುಂದ್ರಾಕ ಶುಲ್ಕದ ಕುರಿತಾಗಿ ಅದೇಶ ಮಾಡುವ ಕಾರಣದಿಂದ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.